**ಓ.ಎಸ್. ನಂಬರ್ : 61/2020**
**ಪಿ .ಡಬ್ಲ್ಯೂ : 1**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕ :08.01.2025

**ಮುಂದುವರೆದ ಪಾಟೀ ಸವಾಲು : 1 ನೇ ಪ್ರತಿವಾದಿಯ ಪರ ವಕೀಲರಿಂದ :**

ನನ್ನ ತಂದೆ ತಾಯಿ ಶಿಸ್ತನ್ನು ಅಳವಡಿಸಿಕೊಂಡಿದ್ದರು ಅಂದರೆ ಸರಿ. ನನ್ನ ತಂದೆಯ ತೀರ್ಮಾನವನ್ನು ಅವರ ಎಲ್ಲಾ ಮಕ್ಕಳು ಒಪ್ಪಿಕೊಳ್ಳುತ್ತಿದ್ದೆವು ಅಂದರೆ ಕೆಲವು ಬಾರಿ ಇಲ್ಲ ಎನ್ನುತ್ತಾರೆ. ನನ್ನ ತಂದೆಯವರು ಅವರ ಜೀವಿತಾವಧಿಯಲ್ಲಿ ದಾವಾ ಆಸ್ತಿಯನ್ನು ವಿಲ್ಲು ಮಾಡಿದ ವಿಚಾರ ಗೊತ್ತಾ ಅಂದರೆ ಇಲ್ಲ ಯಾವುದೇ ವಿಲ್ಲು ಮಾಡಿಲ್ಲ ಎನ್ನುತ್ತಾರೆ. ನನ್ನ ತಂದೆ ನನ್ನ ವಿದ್ಯಾಭ್ಯಾಸಕ್ಕೆ ಸಾಕಷ್ಟು ಖರ್ಚು ಮಾಡಿರುತ್ತಾರೆ ಅಂದರೆ ಇಲ್ಲ. ನನ್ನ ಪ್ರಾಥಮಿಕ ಶಿಕ್ಷಣವನ್ನು ನನ್ನ ಅಜ್ಜಿಯ ಮನೆಯಲ್ಲಿ ಮಾಡಿದ್ದು ಉನ್ನತ ಶಿಕ್ಷಣವನ್ನು ಕೆಲಸಕ್ಕೆ ಸೇರಿಕೊಂಡು ಅದರಿಂದ ಬಂದ ಹಣದಿಂದ ಮಾಡಿಕೊಂಡಿರುತ್ತೇನೆ.

1 ನೇ ಪ್ರತಿವಾದಿಯು ಸರ್ಕಾರಿ ಉದ್ಯೋಗದಲ್ಲಿದ್ದು 2 ನೇ ಪ್ರತಿವಾದಿಯು ಅವರ ಗಂಡನ ಮರಣ ನಂತರ ಅನುಕಂಪದ ಆಧಾರದ ಮೇಲೆ ಅವರ ಗಂಡನ ನೌಕರಿಯನ್ನು ಪಡೆದುಕೊಂಡಿರುತ್ತಾರೆ. ನನ್ನ ಮದುವೆಯಾದ ನಂತರವೂ ನಾವುಗಳು ನಮ್ಮ ತಂದೆ ತಾಯಿಯ ಜೊತೆಗೆ ಅನ್ಯೋನ್ಯ ಬಾಂಧವ್ಯ ಹೊಂದಿದ್ದೆವು. ನನ್ನ ತಂದೆ ತಾಯಿ ಅವರ ಮಕ್ಕಳ ಪೈಕಿ 1 ಮತ್ತು 2 ನೇ ಪ್ರತಿವಾದಿಯ ಜೊತೆ ಹೆಚ್ಚು ಸಂಪರ್ಕ ಹೊಂದಿದ್ದರು. 1 ನೇ ಪ್ರತಿವಾದಿಯು ತನ್ನ

ತಂದೆ ತಾಯಿಯ ಕಷ್ಟ ಸುಖದಲ್ಲಿ ಭಾಗಿಯಾಗುತ್ತಿದ್ದರು ಅಂದರೆ ಸರಿಯಲ್ಲ. ಎಲ್ಲರು ಸ್ಪಂದಿಸುತ್ತಿದ್ದರು ಎನ್ನುತ್ತಾರೆ. ನನ್ನ ತಂದೆ ಸಾಯುವವರೆಗೂ ಯಾವುದೇ ಉದ್ಯೋಗವನ್ನು ಮಾಡಿರಲಿಲ್ಲ. ನನ್ನ ತಂದೆ ಚೆಟ್ಟಳ್ಳಿ ಎಸ್ಟೇಟ್ ನಲ್ಲಿ ಕಚೇರಿ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದರು ಅಂದರೆ ಇಲ್ಲ ಎನ್ನುತ್ತಾರೆ. ಅಲ್ಲದೇ ಕುಶಾಲನಗರದ ಒಂದು ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು ಅಂದರೆ ಇಲ್ಲ ಎನ್ನುತ್ತಾರೆ. ಯಾವುದೇ ವಿಶ್ವಾಸವಿಲ್ಲದೆ ದಾನ ಪತ್ರವನ್ನು ಬರೆಯಲು ಸಾಧ್ಯವಿಲ್ಲ ಅಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ನನ್ನ ತಂದೆಗೆ ಕೊಪ್ಪ ಮತ್ತು ಗುಡ್ಡೇನಹಳ್ಳಿಯಲ್ಲಿ ಪಿತ್ರಾರ್ಜಿತ ಆಸ್ತಿ ಇದೆ ಅಂದರೆ ಸರಿ. ನನ್ನ ತಂದೆಯ ಪಾಲಿಗೇ ಸಮಾರು 100 ಎಕರೆ ಪಿತ್ರಾರ್ಜಿತ ಆಸ್ತಿ ಬಂದಿರುತ್ತದೆ ಅಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

**ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.**

ಓ.ಹೇ.ಕೇ.ಸರಿ ಇದೆ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು
*ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,*
*ಸೋಮವಾರಪೇಟೆ.*